ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**314**
ಸದಸ್ಯರ ಹೆಸರು	:	**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನ ಸಭೆಯಿಂದ ಚುನಾಯಿತರಾದವರು)**
ಉತ್ತರಿಸಬೇಕಾದ ದಿನಾಂಕ	:	**15.12.2021**
ಉತ್ತರಿಸುವ ಸಚಿವರು	:	**ಮಾನ್ಯ ಕಂದಾಯ ಸಚಿವರು**

ಪ್ರಶ್ನೆ	ಉತ್ತರ
(ಅ) ಇಡೀ ರಾಜ್ಯದ್ಯಂತ ಬಿದ್ದಂಥ ಮಳೆಗೆ ಬಹಳಷ್ಟು ಬೆಳೆಗಳು ನಷ್ಟವಾಗಿದ್ದು, ಅದರಲ್ಲೂ ವಿಶೇಷವಾಗಿ ಮಳೆಗಾಲದ ಬೆಳೆ ಹಾಗೂ ನೀರಾವರಿ ಬೆಳೆಗಳಿಗೆ ರೈತರು ಹೆಚ್ಚು ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ) ಈ ಬೆಳೆಗಳಿಗೆ ಸರ್ಕಾರ ಸಾಮಾನ್ಯ ಪರಿಹಾರವನ್ನು ನೀಡಿದರೆ ರೈತರಿಗೆ ಅನ್ಯಾಯವಾಗಲಿರುವುದುರಿಂದ ಬೆಳೆಗೆ ತಕ್ಕಂತೆ ಪರಿಹಾರ ನೀಡಲು ವೈಜ್ಞಾನಿಕ ಸಮಿತಿಯೊಂದನ್ನು ರಚಿಸಿ ಪರಿಹಾರ ನೀಡುವುದೇ; **(ಇ)** ವೈಜ್ಞಾನಿಕ ಪರಿಹಾರ ನೀಡಿದ್ದಲ್ಲಿ ರೈತರು 2ನೇ ಬೆಳೆಯುವುದಕ್ಕೆ ಅನುಕೂಲವಾಗಲಿದೆ ಎಂಬುದನ್ನು ಸರ್ಕಾರ ಮನಗಂಡಿದೆಯೇ? (ವಿವರಿಸುವುದು)	ಕೇಂದ್ರೀಯ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ಹಾಗೂ ಕೇಂದ್ರೀಯ ಗೃಹ ಮಂತ್ರಾಲಯವು ಹೊರಡಿಸಿರುವ SDRF/NDRF ಮಾರ್ಗಸೂಚಿಯನ್ವಯ ಪ್ರಕೃತಿ ವಿಕೋಪದಿಂದ ಉಂಟಾಗುವ ಬೆಳೆ ಹಾನಿ ಪರಿಹಾರವನ್ನು ಇನ್‌ಪುಟ್ ಸಬ್ಸಿಡಿ ರೂಪದಲ್ಲಿ ಸಂತ್ರಸ್ಥರಿಗೆ ಪಾವತಿಸಲಾಗುತ್ತದೆ.

ಕಂಇ 525 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು